ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2519
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ	:	23.03.2022.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಲ್ತಾನಪುರ (ಯರಬನಹಳ್ಳಿ) ಗ್ರಾಮವನ್ನು ಸ್ಥಳಾಂತರಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; (ಮಾಹಿತಿ ನೀಡುವುದು)	ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಸುಲ್ತಾನಪುರ (ಯರಬನಹಳ್ಳಿ) ಗ್ರಾಮವನ್ನು ಸ್ಥಳಾಂತರಿಸುವ ಪ್ರಸ್ತಾಪ ಕಂದಾಯ ಇಲಾಖೆಯಲ್ಲಿ ಈವರೆಗೆ ಸ್ವೀಕೃತವಾಗಿರುವುದಿಲ್ಲ. ಸದರಿ ಗ್ರಾಮವನ್ನು ಸ್ಥಳಾಂತರಿಸುವ ಕುರಿತು ದಿನಾಂಕ:16.12.2021 ಮತ್ತು 27.12.2021 ರಂದು ಸಭೆ ನಡೆಸಲಾಗಿದ್ದು, ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ಈ ಗ್ರಾಮದ ಸ್ಥಳವು ಕೈಗಾರಿಕೆಗಳಿಂದ ಹೊರಬರುವ ಮಾಲಿನ್ಯದಿಂದ ವಾಸಯೋಗ್ಯ ಸ್ಥಳವಾಗಿ ಉಳಿದಿಲ್ಲ ಎನ್ನುವುದು ನಿಜವೇ; (ಅಲ್ಲಿನ ವಾಯುಗುಣ ಮಟ್ಟದ ವಿವರದೊಂದಿಗೆ ಮಾಹಿತಿ ನೀಡುವುದು)	ಸುಲ್ತಾನಪುರ ಗ್ರಾಮ ವ್ಯಾಪ್ತಿಯಲ್ಲಿನ ವಾಯು ಮಾಲಿನ್ಯ ಗುಣಮಟ್ಟವನ್ನು ನಿಯಮಿತವಾಗಿ ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ PM10, PM2.5 ಮಾಪನ ಮಾಡಲಾಗುತ್ತಿದ್ದು, ಅದರ ಅನುಸಾರ PM10 ಅಂಶವು ಕೆಲವೊಮ್ಮೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿದೆ. 2017 ರಿಂದ 2021 ರ ಅವಧಿಯಲ್ಲಿ ನಡೆಸಿರುವ ವಾಯುಮಾಲಿನ್ಯ ಮಾಪನ ವಿಶ್ಲೇಷಣಾ ವರದಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಇ)	ಈ ಗ್ರಾಮದ ಜನರು ಸುತ್ತಮುತ್ತಲಿನ ಕೈಗಾರಿಕೆಗಳ ಮಾಲಿನ್ಯದಿಂದ ಬೇಸತ್ತು ಅಲ್ಲಿ ವಾಸಿಸಲು ಸಾಧ್ಯವಾಗದಿರುವುದರಿಂದ, ಹಳ್ಳಿಯನ್ನೇ ಸ್ಥಳಾಂತರ ಮಾಡುವಂತೆ ಕೋರುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ, ಇದಕ್ಕೆ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)	ಸುಲ್ತಾನಪುರ (ಯರಬನಹಳ್ಳಿ) ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಸಹಾಯಕ ಆಯುಕ್ತರು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಾರ್ವಜನಿಕ ಆಲಿಕೆ ಸಭೆಯ ನಡವಳಿಯ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. ಸದರಿ ಗ್ರಾಮ ಸ್ಥಳಾಂತರ ಕುರಿತು ಕಂದಾಯ ಇಲಾಖೆಯಲ್ಲಿ ಪ್ರಸ್ತಾವನೆ ಸ್ವೀಕೃತವಾದಲ್ಲಿ ಮುಂದಿನ ಕ್ರಮವಹಿಸಲಾಗುವುದು.

ಸಂಖ್ಯೆ: ಕಂಇ 65 ಆರ್‌ಇಹೆಚ್ 2022

(ಆರ್.ಅಶೋಕ)
ಕಂದಾಯ ಸಚಿವರು.

ಅನುಬಂಧ-1

ಸುಲ್ತಾನಪುರ ಗ್ರಾಮವನ್ನು ಸ್ಥಳಾಂತರಿಸುವ ಕುರಿತು ದಿನಾಂಕ: 16-12-2021 ರಂದು ಮಾನ್ಯ ಸಹಾಯಕ ಆಯುಕ್ತರು, ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.

ಸುಲ್ತಾನಪುರ ಗ್ರಾಮ ಸ್ಥಳಾಂತರದ ಕುರಿತಾದ ಉದ್ದಿಮೆಯ ವಿಚಾರಣೆ ಸಭೆಯ ಸ್ಥಳ	ಸಹಾಯಕ ಆಯುಕ್ತರ ಕಛೇರಿ, ಬಳ್ಳಾರಿ

1.	ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ
2	ಶ್ರೀ ಉಮಾಶಂಕರ್. ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ.
3.	ಶ್ರೀ ಕೆ. ಮಂಜುನಾಥ, ಕಂದಾಯ ನೀರಕ್ಷರು, ತೋರಣಗಲ್ಲು ಗ್ರಾಮ
4	ಶ್ರೀ ಯು. ಹನುಮಂತಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೋರಣಗಲ್ಲು ಗ್ರಾಮ
ಉದ್ದಿಮೆಗಳ ಪರವಾಗಿ ಹಾಜರಿದ್ದ ಅಧಿಕಾರಿಗಳ ವಿವರ	
1	ಶ್ರೀ ಸಂಜಯ ಕೆ. ಹಂದುರ್, ಹಿರಿಯ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್
2	ಶ್ರೀ ಬ್ರಿಗೇಡಿಯರ್ ಎಸ್.ಬಿ. ವಜ್ರಮಟ್ಟಿ, ಉಪಾಧ್ಯಕ್ಷರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್
3	ಶ್ರೀ ಇ.ಜಿ. ಶಶಿಕುಮಾರ್, ಪ್ರಧಾನ ವ್ಯವಸ್ಥಾಪಕರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್
4	ಶ್ರೀ ಆರ್.ಟಿ.ಶ್ರೀನಿವಾಸ ರಾವ್, ಸಹಾಯಕ ವ್ಯವಸ್ಥಾಪಕ ನಿರ್ದೇಶಕರು, (ಪರಿಸರ) ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್
5	ಶ್ರೀ ಬಿ.ಎಸ್. ನರಸಿಂಹ ಮೂರ್ತಿ, ಹಿರಿಯ ಪ್ರಧಾನ ವ್ಯವಸ್ಥಾಪಕರು, ಮೆ॥ ಜೆ.ಎಸ್. ಡಬ್ಲ್ಯೂ ಸಾ ಲಿಮಿಟೆಡ್
6	ಶ್ರೀ ಪ್ರದೀಪ್ ಮನೋಹರ್, ಸಹಾಯಕ ವ್ಯವಸ್ಥಾಪಕ ನಿರ್ದೇಶಕರು, (ಪರಿಸರ) ಮೆ॥ ಜೆ.ಎಸ್. ಡಬ್ಲ್ಯೂ ಎನರ್ಜಿ ಲಿಮಿಟೆಡ್
7	ಶ್ರೀ ಜಿ.ಕೆ. ಕುಲಕರ್ಣಿ, ಹಿರಿಯ ವ್ಯವಸ್ಥಾಪಕರು, ಮೆ॥ ಎಪ್ಸಲಾನ್ ಕಾರ್ಬನ್ ಪ್ರೈವೆಟ್ ಲಿಮಿಟೆಡ್
8	ಶ್ರೀ ಆರ್. ವಿಮಲ್ ಕುಮಾರ್, ವ್ಯವಸ್ಥಾಪಕರು, ಮೆ॥ ಎಪ್ಸಲಾನ್ ಕಾರ್ಬನ್ ಪ್ರೈವೆಟ್ ಲಿಮಿಟೆಡ್
9	ಶ್ರೀ ಜೆ.ವಿ.ಶಿವರಾಜ, ಮೆ॥ ಜೆ.ಎಸ್. ಡಬ್ಲ್ಯೂ ಎನರ್ಜಿ ಲಿಮಿಟೆಡ್
10	ಶ್ರೀ ಶಿವಕುಮಾರ್ ಮಾಳಗಿ, ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್
11	ಶ್ರೀ ಎನ್.ಬಿ.ಮುರಳಿದರ್, ಹಿರಿಯ ವ್ಯವಸ್ಥಾಪಕರು, ಇ.ಹೆಚ್.ಎಸ್. ಮೆ॥ ಮಿನೆರಾ ಸ್ಟೀಲ್ ಆಂಡ್ ಪವರ್ ಪ್ರೈವೆಟ್ ಲಿಮಿಟೆಡ್
12	ಶ್ರೀ ಚಂದ್ರಶೇಖರ್.ಜಿ.ಎಸ್. ಮೆ॥ ಮಿನೆರಾ ಸ್ಟೀಲ್ ಆಂಡ್ ಪವರ್ ಪ್ರೈವೆಟ್ ಲಿಮಿಟೆಡ್
13	ಶ್ರೀ ನಾಝಿರ್ ಅಹಮ್ಮದ್, ಸಹಾಯಕ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಮಿನೆರಾ ಸ್ಟೀಲ್ ಆಂಡ್ ಪವರ್ ಪ್ರೈವೆಟ್ ಲಿಮಿಟೆಡ್
14	ಶ್ರೀ ಸುನೀಲ್ ಎನ್.ಎಸ್. ಉಪ ಪ್ರಧಾನ ವ್ಯವಸ್ಥಾಪಕ, ಮೆ॥ ಜೆ.ಎಸ್.ಡಬ್ಲ್ಯೂ ಪೆಂಟ್ಸ್ ಲಿಮಿಟೆಡ್
15	ಶ್ರೀ ಎಮ್.ಎಲ್. ವಶಿಸ್ಟ್, ಮೆ॥ ಪದ್ಮಾವತಿ ಫೆರೋಸ್ ಲಿಮಿಟೆಡ್.
16	ಶ್ರೀ ಪಂಕಜ ಶರ್ಮಾ, ಮೆ॥ ಪದ್ಮಾವತಿ ಫೆರೋಸ್ ಲಿಮಿಟೆಡ್,

17	ಶ್ರೀ ಮಹೇಶ ಕೋಮಲ್. ಮೆ॥ ಭುವಲ್ಕಾ ಪೈಪ್ಸ್ ಪ್ರೈವೇಟ್ ಲಿಮಿಟೆಡ್
18	ಶ್ರೀ ಕೆ. ನೆಟ್ಟಿಕನ್ನಯ್, ಮೆ॥ ಭುವಲ್ಕಾ ಪೈಪ್ಸ್ ಪ್ರೈವೇಟ್ ಲಿಮಿಟೆಡ್

ಸಭೆಯ ನಡವಳಿಗಳು

ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯಲ್ಲಿ ಹಾಜರಿದ್ದ ವಿವಿಧ ಉದ್ದಿಮೆಗಳ ಪ್ರತಿನಿಧಿಗಳನ್ನು ಹಾಗೂ ಸಭೆಯಲ್ಲಿದ್ದ ಇತರೆ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸಿದರು.

ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ-ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸುಲ್ತಾನಪುರ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಗ್ರಾಮದ ಸ್ಥಳಾಂತರದ ಬಗ್ಗೆ ಈಗಾಗಲೇ ದಿನಾಂಕ: 02-11-2021 ರಂದು ಸುಲ್ತಾನಪುರ ಗ್ರಾಮ ಸ್ಥಳಾಂತರಿಸುವ ಕುರಿತು ಸಾರ್ವಜನಿಕ ವಿಚಾರಣೆ ಸಭೆಯನ್ನು ಗ್ರಾಮದಲ್ಲಿ ನಡೆಸಲಾಯಿತು. ಸದರಿ ಸಭೆಯ ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿವಿಧ ಇಲಾಖೆಗಳಿಗೆ ಉದ್ದಿಮೆಗಳಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ ವರದಿ ನೀಡುವಂತೆ ಪತ್ರ ಬರೆದು ವರದಿಯನ್ನು ಪಡೆದಿರುವುದಾಗಿ ತಿಳಿಸಲಾಯಿತು.

ವಿವಿಧ ಇಲಾಖೆಯವರು ಸಲ್ಲಿಸಿರುವ ವರದಿಯನ್ನು ಸಭೆಗೆ ಮಂಡಿಸಲಾಯಿತು. ವಿವರಗಳು ಈ ಕೆಳಕಂಡಂತಿವೆ.

ಕ್ರಮ. ಸಂ	ಇಲಾಖೆಯ ಹೆಸರು	ಸಲ್ಲಿಸಿರುವ ವರದಿಯ ಸಾರಾಂಶ
1	ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ, ಬಳ್ಳಾರಿ	ಸುಲ್ತಾನಪುರ ಗ್ರಾಮ ಸಂಡೂರು ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಮಿಕ ಇಲಾಖೆಗೆ ಇಲ್ಲಿಯವರೆಗೆ ಯಾವುದೇ ಮೊಕದ್ದಮೆಗಳು ದಾಖಲಾಗಿರುವುದಿಲ್ಲ ಎಂದು ಪತ್ರ ಬರೆದಿರುತ್ತಾರೆ.
2	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ	ಸುಲ್ತಾನಪುರ ಗ್ರಾಮದ ಸುತ್ತಮುತ್ತಲಿನ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಭೂ ವಿವಾದಗಳು/ ಕ್ರಿಮಿನಲ್ ಮೊಕದ್ದಮೆ ಇದ್ದಲ್ಲಿ ವರದಿ ಸಲ್ಲಿಸುವಂತೆ ಅಭಿವೃದ್ಧಿ ಅಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬಳ್ಳಾರಿ ರವರಿಗೆ ಪತ್ರ ಬರೆದಿರುತ್ತಾರೆ.
3	ಅಭಿವೃದ್ಧಿ ಅಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬಳ್ಳಾರಿ	ಸುಲ್ತಾನಪುರ ಗ್ರಾಮದ ಯಾವುದೇ ಜಮೀನುಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲವೆಂದು ಪತ್ರ ಬರೆದಿರುತ್ತಾರೆ.
4	ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಸಂಡೂರು	ಸುಲ್ತಾನಪುರ ಗ್ರಾಮದ ಕೊಳವೆ ಭಾವಿಗಳ ನೀರಿನ ಮಾದರಿಗಳನ್ನು ಸಂಗ್ರಹಿಸಿ ಉಪ ವಿಭಾಗದ ಪ್ರಯೋಗಾಲಯದಲ್ಲಿ ಲಭ್ಯವಿರುವ Physical & Chemical Parameters ಗಳಿಗೆ ಮಾತ್ರ ಪರೀಕ್ಷೆಯನ್ನು ಮಾಡಿರುವುದಾಗಿ ತಿಳಿಸಿ ವಿಶ್ಲೇಷಣಾ ವರದಿಗಳನ್ನು ಸಲ್ಲಿಸಿರುತ್ತಾರೆ.
5	ಹಿರಿಯ ಭೂ ವಿಜ್ಞಾನಿ, ಜಿಲ್ಲಾ ಅಂತರ್ಜಲ ಕಛೇರಿ, ಬಳ್ಳಾರಿ	ಸಂಡೂರು ತಾಲ್ಲೂಕಿನ ಸುಲ್ತಾನಪುರ ಗ್ರಾಮದ ವ್ಯಾಪ್ತಿಯಲ್ಲಿ ಅಂತರ್ಜಲ ಗುಣಮಟ್ಟ ಕುಂಠಿತಗೊಂಡಿರುವ ಬಗ್ಗೆ ತಮ್ಮ

		ಕಛೇರಿಯಿಂದ ಅಧ್ಯಯನ ಕೈಗೊಂಡಿರುವುದಿಲ್ಲ ಎಂದು ಪತ್ರ ಬರೆದಿರುತ್ತಾರೆ.
6	ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ	ಸುಲ್ತಾನಪುರ ಗ್ರಾಮದ ರೈತರ ಜಮೀನಿನಲ್ಲಿ ಕೃಷಿ ಬೆಳೆಗಳಿಗೆ ಹಾನಿ ಉಂಟಾಗಿ ಇಳುವರಿ ಕಡಿಮೆಯಾಗಿರುವುದರ ಬಗ್ಗೆ ಕ್ಷೇತ್ರ ಭೇಟಿ ನೀಡಿ ಪರಿಶೀಲಿಸಿ ಸಹಾಯಕ ಕೃಷಿ ನಿರ್ದೇಶಕರು, ಸಂಡೂರು ಇವರು ವರದಿಯನ್ನು ಸಲ್ಲಿಸಿರುತ್ತಾರೆ.
7	ತೋಟಗಾರಿಕಾ ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ (ಜಿಲ್ಲಾ ಪಂಚಾಯತ್) ಬಳ್ಳಾರಿ	ಸುಲ್ತಾನಪುರ ಗ್ರಾಮದ ರೈತರ ಜಮೀನಿನಲ್ಲಿ ರೈತರ ತಾಕುಗಳಿಗೆ ಭೇಟಿ ನೀಡಿ ಸೂಕ್ತ ಕ್ರಮ ವರದಿ ಸಲ್ಲಿಸುವಂತೆ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಸಂಡೂರು ರವರಿಗೆ ಪತ್ರ ಬರೆದಿದ್ದು ಅದರಂತೆ ಸದರಿ ಅಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ.
8	ಉಪ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬಳ್ಳಾರಿ	ಸುಲ್ತಾನಪುರ ಗ್ರಾಮದ ಜಾನುವಾರುಗಳ ಆರೋಗ್ಯದ ಕುರಿತು ಸಹಾಯಕ ನಿರ್ದೇಶಕರು ಸಂಡೂರು/ಪಶುವೈದ್ಯಾಧಿಕಾರಿಗಳು. ತೋರಣಗಲ್ಲು ರವರು ರಾಸುಗಳಲ್ಲಿ ಶ್ವಾಸಕೋಶದ ತೊಂದರೆ ಹಾಗೂ ಗರ್ಭದರಿಸುವ ತೊಂದರೆಗೆ ಸಂಬಂಧಿಸಿದ ಕಾಯಿಲೆಗಳು ಆಗಾಗ ಕಂಡುಬರುತ್ತಿವೆ ಎಂದು ನೀಡಿದ ವರದಿಯನ್ನು ಸಲ್ಲಿಸಿರುತ್ತಾರೆ.
9	ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ	ಸುಲ್ತಾನಪುರ ಗ್ರಾಮದ ನಿವಾಸಿಗಳ ವೈದ್ಯಕೀಯ ತಪಾಸಣೆ ಮಾಡಿ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ವಿಠ್ಠಲಾಪುರ ಇವರು ವರದಿಯನ್ನು ಸಲ್ಲಿಸಿರುತ್ತಾರೆ.
10	ತಹಶೀಲ್ದಾರರು, ಸಂಡೂರು	ವರದಿ ಸಲ್ಲಿಸಿರುವುದಿಲ್ಲ.

ಮುಂದುವರೆದು, ಮಾತನಾಡಿದ ಸಹಾಯಕ ಆಯುಕ್ತರು ಸುಲ್ತಾನಪುರ ಗ್ರಾಮದಲ್ಲಿ ನಡೆಸಿದ ಸಾರ್ವಜನಿಕ ಸಭೆಯಲ್ಲಿ ಎಲ್ಲಾ ಸಾರ್ವಜನಿಕರು ತಮ್ಮ ಗ್ರಾಮವನ್ನು ಸ್ಥಳಾಂತರಿಸಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ಮತ್ತು ಸೂಕ್ತ ಪರಿಹಾರವನ್ನು ನೀಡುವಂತೆ ಆಗ್ರಹಿಸಿರುವ ಬಗ್ಗೆ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಉದ್ದಿಮೆಯ ಪ್ರತಿನಿಧಿಗಳಿಗೆ ತಿಳಿಸಿದರು. ಗ್ರಾಮದ ಸುತ್ತಲು ಒಟ್ಟು 11 ಕೆಂಪು ಪ್ರವರ್ಗದ ಉದ್ದಿಮೆಗಳಿದ್ದು ಇದರಿಂದ ಗ್ರಾಮದ ವಾಸಿಸುತ್ತಿರುವ ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿರುವುದಾಗಿ ತಿಳಿಸಿದರು. ಗ್ರಾಮವನ್ನು ಸ್ಥಳಾಂತರಿಸುವ ಬಗ್ಗೆ ಭೂ ಸ್ವಾಧೀನ ಕುರಿತು ಪರಿಹಾರ ನೀಡುವುದರ ಬಗ್ಗೆ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು. ಗ್ರಾಮವನ್ನು ಸ್ಥಳಾಂತರ ಮಾಡುವುದಾದರೆ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳು ಕಲ್ಪಿಸಿಕೊಡುವುದು, ನಿವೇಶನಕ್ಕಾಗಿ ಜಾಗ, ನಿವೇಶನ ಕಟ್ಟಿಕೊಡುವುದು, ಗ್ರಾಮದಲ್ಲಿರುವ ಪ್ರತಿ ಕುಟುಂಬದ ಒಬ್ಬ ಸದಸ್ಯರಿಗೆ ಖಾಯಂ ನೌಕರಿ ನೀಡುವ ಬಗ್ಗೆ ಉದ್ದಿಮೆಯ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಸಭೆಗೆ ಮಂಡಿಸುವಂತೆ ತಿಳಿಸಿದರು.

1) ಶ್ರೀ ಸಂಜಯ ಕೆ. ಹಂದುರ್, ಹಿರಿಯ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್- ರವರು ಮಾತನಾಡುತ್ತಾ, ಸುಲ್ತಾನಪುರ ಗ್ರಾಮವು ಉದ್ದಿಮೆಗಳಿಂದ ಸುತ್ತುವರೆದಿರುವುದಾಗಿ ತಿಳಿಸಿದರು. ವಿಜಯನಗರ ಅಭಿವೃದ್ಧಿ ಪ್ರಾಧಿಕಾರದವರು ಈ ಮೊದಲೇ ಯೋಜನೆ ರೂಪಿಸಿದಲ್ಲಿ ಸುಲ್ತಾನಪುರ ಗ್ರಾಮವು ಉದ್ದಿಮೆ ಪ್ರದೇಶದ ಒಳಗಡೆ ಬರುವ

ಸಂಭವವಿರುತ್ತಿರುವುದಿಲ್ಲವೆಂದು ತಿಳಿಸಿದರು. ಸುಲ್ತಾನಪುರ ಗ್ರಾಮವನ್ನು ಹೊರತು ಪಡಿ ಉಳಿದ ಎಲ್ಲಾ ಪ್ರದೇಶವು ಕೈಗಾರಿಕಾ ಪ್ರದೇಶವಾಗಿರುವುದಾಗಿ ತಿಳಿಸಿದರು. ಸುಲ್ತಾನಪು ಗ್ರಾಮಕ್ಕೆ ಸುತ್ತುವರೆದಂತೆ ಇರುವ ಎಲ್ಲಾ ಉದ್ದಿಮೆಗಳು ಸೂಕ್ತ ವಾಯು ಮಾಲಿನ್ಯ ನಿಯಂತ್ರ ಉಪಕರಣಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಸ್ಥಳೀಯರ ಕೆಲವು ಕ್ರಷರ್‌ಗಳನ್ನು ಅಳವಡಿಸಿದ್ದು ಅವುಗಳಿಂದ ವಾಯು ಮಾಲಿನ್ಯ ಉಂಟಾಗುತ್ತಿರುವುದಾ ತಿಳಿಸಿದರು. ಗ್ರಾಮವನ್ನು ಸ್ಥಳಾಂತರಿಸುವುದಾದರೆ ಉದ್ದಿಮೆಯ ಪರವಾಗಿ ಎಲ್ಲಾ ಸಹಾಯವನ್ನು ನೀಡುವುದಾಗಿ ತಿಳಿಸಿದರು. ಪರಿಹಾರ ಧನವು ಸಮಂಜಸವಾಗಿ ನಿಗದಿ ಪಡಿಸುವಂತೆ ತಿಳಿಸಿದರು ಸಭೆಯಲ್ಲಿ ಮಾನ್ಯ ಸಹಾಯಕ ಆಯುಕ್ತರು ತಿಳಿಸಿರುವಂತೆ ಕೃಷಿ/ತೋಟಗಾರಿಕೆ ಚಟುವಟಿಕೆಗಳ ಮೇಲೆ ಉದ್ದಿಮೆಯಿಂದ ಮಾತ್ರ ತೊಂದರೆ ಉಂಟಾಗುತ್ತಿರುವುದುಲ್ಲದೆ ಮಣ್ಣಿನ ಗುಣಮಟ್ಟ ನೀರಿನ ವ್ಯವಸ್ಥೆ ಹಾಗೂ ಇನ್ನಿತರ ಕಾರಣಗಳಿಂದಲೂ ಸಹ ಕೃಷಿ/ತೋಟಗಾರಿಕೆ ಚಟುವಟಿ ಕುಂಠಿತಗೊಳ್ಳಬಹುದೆಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ ಗ್ರಾಮವನ್ನು ಸ್ಥಳಾಂತರಿಸಲು ತಮ್ಮ ಸಂಪೂರ್ಣ ಬೆಂಬಲವಿದ್ದು ಆದರೆ ಪರಿಹಾರ ಧನ ಸಮಂಜಸವಾಗಿರಬೇಕೆಂದು ತಿಳಿಸಿದರು.

2) **ಶ್ರೀ ನಾಝಿರ್ ಅಹಮ್ಮದ್, ಸಹಾಯಕ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಮಿನೆರಾ ಸ್ಟೀಲ್ ಆಂಡ್ ಪವರ್ ಪ್ರೈವೆಟ್ ಲಿಮಿಟೆಡ್**– ರವರು ಮಾತನಾಡುತ್ತಾ, ಸುಲ್ತಾನಪುರ ಗ್ರಾಮದವರಿಗೆ ಉದ್ದಿಮೆಯವರಿಂದ ಸ್ಥಳೀಯರಿಗೆ ಉದ್ಯೋಗ ನೀಡಲಾಗಿದ್ದು, ಜೆ.ಸಿ.ಬಿ. ಹಾಗೂ ಇನ್ನಿತರ ವಾಹನಗಳನ್ನು ಸುಲ್ತಾನಪುರ ಗ್ರಾಮದವರೆ ಉದ್ದಿಮೆಯವರಿಗೆ ಬಾಡಿಗೆ ನೀಡುತ್ತಿದ್ದು ಆರ್ಥಿಕವಾಗಿಯು ಸಹ ಗ್ರಾಮಸ್ಥರು ಸುಶಿಕ್ಷಿತವಾಗಿರುತ್ತಾರೆಂದು ತಿಳಿಸಿದರು. ಗ್ರಾಮದ ಕೆಲವು ಗ್ರಾಮಸ್ಥರಿಗೆ ಸ್ಥಳಾಂತರದ ಬಗ್ಗೆ ಒಲವು ಇರುವುದಿಲ್ಲವೆಂದು ಕೆಲವೆ ಕೆಲವು ಮುಖಂಡರು ಗ್ರಾಮವನ್ನು ಸ್ಥಳಾಂತರಿಸುವುದಕ್ಕೆ ಒತ್ತಾಯಿಸುತ್ತಿರುವುದಾಗಿ ತಿಳಿಸಿದರು. ಗ್ರಾಮವು ಸ್ಥಳಾಂತರಗೊಂಡರೆ ಬಹಳ ಪರಿಹಾರ ಧನ ಬರಬಹುದೆಂದು ಕೆಲವು ಜನರ ಆಶಯವಾಗಿರುವುದರಿಂದ ಸ್ಥಳಾಂತರಿಸಲು ಪಟ್ಟು ಹಿಡಿರುವುದಾಗಿ ತಿಳಿಸಿದರು. ತಹಶೀಲ್ದಾರ್ ಸಂಡೂರು ರವರ ಆದೇಶದಂತೆ ತಾವು ಉದ್ದಿಮೆಯ ಸುತ್ತಲು ಇರುವ ಜಮೀನುಗಳಿಗೆ ಬೆಳೆ ಪರಿಹಾರ ನೀಡುತ್ತಿರುವುದಾಗಿ ತಿಳಿಸಿದರು. ಸುಲ್ತಾನಪುರ ಗ್ರಾಮದ ಸುತ್ತಮುತ್ತಲು ಒಣ ಭೂಮಿ ಹೆಚ್ಚಿದ್ದು ಯಾವುದೇ ಬೆಳೆ ಬೆಳೆಯದಿದ್ದರು ಸಹ ಬೆಳೆ ಪರಿಹಾರ ನೀಡುತ್ತಿರುವುದಾಗಿ ತಿಳಿಸಿದರು. ಉದ್ದಿಮೆಗಳಿಂದ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳು ನೀಡಲಾಗಿದ್ದು ರಸ್ತೆ ಸಹ ನಿರ್ಮಿಸಿದ್ದು ರಸ್ತೆಯನ್ನು ಸಹ ವಾರದಲ್ಲಿ ಮೂರು ದಿನ ರಸ್ತೆಯನ್ನು ಸ್ವಚ್ಛಗೊಳಿಸುತ್ತಿರುವುದಾಗಿ ತಿಳಿಸಿದರು. ಸುಲ್ತಾನಪುರ ಗ್ರಾಮದ ಮೂಲಕ ಹೋಗುವ ರಸ್ತೆಯು ಐದು ಗ್ರಾಮ ಪಂಚಾಯತಿಗಳಿಗೆ ಸಂಪರ್ಕ ಕಲ್ಪಿಸುವುದರಿಂದ ಎಲ್ಲಾ ವಾಹನಗಳು ಈ ರಸ್ತೆಯ ಮೂಲಕ ಹಾದು ಹೋಗುವುದರಿಂದ ರಸ್ತೆಯಿಂದ ಸಹ ಧೂಳು ಉಂಟಾಗುತ್ತಿರುವುದಾಗಿ ತಿಳಿಸಿದರು. ತಮ್ಮ ಉದ್ದಿಮೆಯಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿಗದಿಪಡಿಸಿರುವ ಎಲ್ಲಾ ವಾಯು ಮಾಲಿನ್ಯ ಉಪಕರಣಗಳನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದರು. ಉಳಿದಂತೆ ಗ್ರಾಮವನ್ನು ಸ್ಥಳಾಂತರಿಸಲು ಸಹಮತವಿರುವುದಾಗಿ ತಿಳಿಸಿದರು.

3) ಶ್ರೀ ಬ್ರಿಗೇಡಿಯರ್ ಎಸ್.ಬಿ. ವಜ್ರಮಟ್ಟಿ, ಉಪಾಧ್ಯಕ್ಷರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್- ರವರು ಮಾತನಾಡುತ್ತಾ, ಗ್ರಾಮವು ಉದ್ದಿಮೆಯಿಂದ ಸುತ್ತುವರೆದಿರುವುದರಿಂದ ಗ್ರಾಮವು ಸ್ಥಳಾಂತರಿಸುವುದು ಸೂಕ್ತವೆಂದು ತಿಳಿಸಿದರು. ಗ್ರಾಮದ ಕೆಲವರು ಉದ್ದಿಮೆಗಳ ಮೇಲೆ ಉದ್ದೇಶಪೂರ್ವಕವಾಗಿ ದೂರುಗಳನ್ನು ನೀಡುತ್ತಿದ್ದು ಇದರಿಂದ ಉದ್ದಿಮೆಯವರಿಗೆ ತೊಂದರೆ ಉಂಟಾಗುತ್ತಿರುವುದಾಗಿ ತಿಳಿಸಿದರು. ಜಿಲ್ಲಾಡಳಿತದ ಮುಖಾಂತರವೇ ಭೂಮಿಯನ್ನು ಗುರುತಿಸಿ ಗ್ರಾಮವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಭೂಮಿಯನ್ನು ಗುರುತಿಸುವ ಸಮಯದಲ್ಲಿ ಕೃಷಿ ಭೂಮಿಯನ್ನು ಹೊರತು ಪಡಿಸಿ ಒಣ ಭೂಮಿಯನ್ನು ಗುರುತಿಸುವುದು ಸೂಕ್ತವೆಂದು ತಿಳಿಸಿದರು. ತಕ್ಷಣದಿಂದಲೆ ಗ್ರಾಮ ಸ್ಥಳಾಂತರಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ಕೈಗೊಳ್ಳಬೇಕೆಂದು ಉಳಿದಂತೆ ಉದ್ದಿಮೆಯವರು ಸಹ ಇದಕ್ಕೆ ಕೈ ಜೋಡಿಸಲು ಬದ್ಧವಾಗಿರುವುದಾಗಿ ತಿಳಿಸಿದರು. ಗ್ರಾಮವು ಸ್ಥಳಾಂತರವಾದಲ್ಲಿ ಕೆಲವು ಗ್ರಾಮಸ್ಥರು ವಲಸೆ ಹೋಗಬಹುದೆಂದು ತಿಳಿಸಿದರು. ಸ್ಥಳಾಂತರದ ಸಮಯದಲ್ಲಿ ಪರಿಹಾರವನ್ನು ಹಣದ ರೂಪದಲ್ಲಿ ನೀಡುವ ಬಗ್ಗೆ ಅಥವಾ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡುವ ಬಗ್ಗೆ ಮೊದಲೇ ನಿರ್ಧಾರ ಕೈಗೊಳ್ಳಬೇಕೆಂದು ತಿಳಿಸಿದರು.

4) ಸಂಜಯ ಕೆ.ಹಂದುರ್: ಪುನ: ಮಾತನಾಡುತ್ತಾ, ಗ್ರಾಮವನ್ನು ಸ್ಥಳಾಂತರಿಸುವ ಸಮಯದಲ್ಲಿ ಮೂರು ವಿಭಾಗಗಳಾಗಿ ವಿಂಗಡಿಸಿ ಅದನ್ನು Low income group (LIG), Middle income group(MIG), High income group(HIG) ವಿಭಾಗ ಮಾಡಿದಲ್ಲಿ ಅನೂಕುಲವಾಗುತ್ತದೆ ಎಂದು ತಿಳಿಸಿದರು. ಗ್ರಾಮ ಸ್ಥಳಾಂತರವಾದಾಗ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ವಿಧ್ಯುತ್‌ಗಳನ್ನು CSR ಅಡಿಯಲ್ಲಿ ಉದ್ದಿಮೆಗಳಿಂದ ಮಾಡಲು ಅನೂಕೂಲವಾಗುತ್ತದೆಂದು ಹಾಗೂ CSR ಕಾರ್ಯಗಳನ್ನು ಜಿಲ್ಲಾಡಳಿತದ ವತಿಯಿಂದ ನಿರ್ವಹಿಸಬೇಕೆಂದು ತಿಳಿಸಿದರು. ಗ್ರಾಮ ಸ್ಥಳಾಂತರಿಸುವ ಪ್ರಕ್ರಿಯೆಯಲ್ಲಿ ಎಲ್ಲಾ ಉದ್ದಿಮೆಗಳಿಂದ ಪಾತ್ರದ ಕುರಿತು ತಿಳಿಸಿದಲ್ಲಿ ತಾವು ಸದರಿ ವಿಷಯದ ಕುರಿತು ಉದ್ದಿಮೆಗಳಿಂದ ಹಿರಿಯರೊಂದಿಗೆ ಚರ್ಚಿಸಿ ತಿರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದರು.

5) ಶ್ರೀ ಆರ್.ಟಿ.ಶ್ರೀನಿವಾಸ ರಾವ್, ಸಹಾಯಕ ವ್ಯವಸ್ಥಾಪಕ ನಿರ್ದೇಶಕರು, (ಪರಿಸರ) ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್- ರವರು ಮಾತನಾಡುತ್ತಾ ತಮ್ಮ ಉದ್ದಿಮೆಯಲ್ಲಿ ಅತ್ಯಾಧುನಿಕ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದ್ದು ಅದಕ್ಕಾಗಿ ರೂ 3300 ಕೋಟಿಗಳನ್ನು ಖರ್ಚು ಮಾಡಿರುವುದಾಗಿ ಹಾಗೂ ಇನ್ನು ರೂ. 800 ಕೋಟಿಯನ್ನು ಹೆಚ್ಚುವರಿಯಾಗಿ ಉಪಕರಣಗಳನ್ನು ಅಳವಡಿಸಲು ಉದ್ದೇಶಿಸಿರುವುದಾಗಿ ತಿಳಿಸಿದರು. ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಗಾಳಿಯ ಪ್ರಸರಣ (disperson) ಪ್ರಮಾಣವು ಕಡಿಮೆ ಇರುವುದರಿಂದ ಸುಲ್ತಾನಪುರ ಗ್ರಾಮಕ್ಕೆ ಧೂಳು ಹೋಗುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿ ಪಡಿಸಿರುವ ಪ್ರಮಾಣದ ಮಿತಿಯಲ್ಲಿ ಎಲ್ಲಾ ವಾಯು ಮಾಲಿನ್ಯ ಉಪಕರಣಗಳು ಕಾರ್ಯಾಚರಿಸುತ್ತಿರುವುದಾಗಿ

ತಿಳಿಸಿದರು. 65% ರಿಂದ 70% ವಾಯು ಮಾಲಿನ್ಯವು ವಾಹನಗಳ ಓಡಾಟದಿಂದ ಉಂಟಾಗುವುದಾಗಿ ತಿಳಿಸಿದರು.

6) ಶ್ರೀ ಬ್ರಿಗೇಡಿಯರ್ ಎಸ್.ಬಿ. ವಜ್ರಮಟ್ಟಿ, ಉಪಾಧ್ಯಕ್ಷರು, ಮೆ॥ ಜೆ.ಎಸ್. ಡಬ್ಲ್ಯೂ ಸ್ಟೀಲ್ ಲಿಮಿಟೆಡ್-ರವರು ಪುನಃ ಮಾತನಾಡುತ್ತಾ, ಗ್ರಾಮದ ಸ್ಥಳಾಂತರದ ಸಮಯದಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯು ಜಿಲ್ಲಾಡಳಿತ ವತಿಯಿಂದ ಮಾಡಬೇಕೆಂದು ತಿಳಿಸಿದರು. ಗ್ರಾಮದ ಸಲುತ್ತಲು 11 ಕೆಂಪು ಬೃಹತ್ ಉದ್ದಿಮೆಗಳಿದ್ದು ತಾವುಗಳು ಗ್ರಾಮ ಸ್ಥಳಾಂತರಿಸಲು ಎಲ್ಲಾ ಸಹಕಾರ ನೀಡುವುದಾಗಿ ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಜಿಲ್ಲಾಡಳಿತ ವತಿಯಿಂದ ಸಮಿತಿಯನ್ನು ರಚಿಸಿ ಸಮಿತಿಯ ಭೂ ಸ್ವಾಧೀನ ಸ್ಥಳಾಂತರಕ್ಕೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳಿಗೆ ತಗಲುವ ವೆಚ್ಚವನ್ನು ನಿಗದಿಪಡಿಸುವಂತೆ ತಿಳಿಸಿದರು.

ಕೊನೆಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರು ಮಾತನಾಡುತ್ತಾ ಉದ್ದಿಮೆಯವರು ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕವನ್ನು, ಆಸ್ಪತ್ರೆ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ತಿಳಿಸಿದರು. ಉದ್ದಿಮೆಗಳಿಂದ ಗ್ರಾಮಕ್ಕೆ ತೊಂದರೆ ಉಂಟಾಗುತ್ತಿರುವುದರಿಂದ ಗ್ರಾಮವನ್ನು ಸ್ಥಳಾಂತರಿಸಲು ಕ್ರಮಕೈಗೊಳ್ಳಲು ಉದ್ದಿಮೆಗಳು ಜವಾಬ್ದಾರಿ ಮೆರೆಯುವಂತೆ ಸೂಚಿಸಲಾಯಿತು. ಉದ್ದಿಮೆಯ ಪರವಾಗಿ ಉಪಸ್ಥಿತರಿದ್ದ ಶ್ರೀ ಸಂಜಯ. ಕೆ ಹಂದುರ ರವರು ಈ ಹಿಂದೆ ಕೈಗಾರಿಕೆಗಳಿಗಾಗಿ ನಡೆದ ಗ್ರಾಮಗಳ ಸ್ಥಳಾಂತರದ ಬಗ್ಗೆ ತಮಗೆ ಅನುಭವವಿರುವುದಾಗಿ ತಿಳಿಸಿರುವುದರಿಂದ ಶ್ರೀ ಸಂಜಯ ರವರಿಗೆ ಗ್ರಾಮದ ಸ್ಥಳಾಂತರದ ಕುರಿತು ತಮ್ಮ ಅನುಭವವನ್ನು ಲಿಖಿತ ರೂಪದಲ್ಲಿ ನೀಡುವಂತೆ ತಿಳಿಸಿದರು. ಕೊನೆಯಲ್ಲಿ ಸದರಿ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಉದ್ದಿಮೆದಾರರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಡಾ.ಆಕಾಶ್ ಶಂಕರ್, ಭಾ.ಆ.ಸೇ
ಸಹಾಯಕ ಆಯುಕ್ತರು ಮತ್ತು
ಉಪ ವಿಭಾಗದ ದಂಡಾಧಿಕಾರಿಗಳು,
ಬಳ್ಳಾರಿ

ಸುಲ್ತಾನಪುರ ಗ್ರಾಮವನ್ನು ಸ್ಥಳಾಂತರಿಸುವ ಕುರಿತು ದಿನಾಂಕ: 27-12-2021 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹೆಸರು, ಪದನಾಮ ಮತ್ತು ಇಲಾಖೆ	
1.	ಶ್ರೀ ಪವನ ಕುಮಾರ ಮಾಲಪಾಟಿ, ಭಾ.ಆ.ಸೇ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ
2.	ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ
3.	ಶ್ರೀ ಉಮಾಶಂಕರ್. ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ.
4.	ಶ್ರೀ ಬಿ.ಸೋಮಶೇಖರ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ
5.	ಶ್ರೀ ನಾಗದೇವ, ತಾಂತ್ರಿಕ ಸಹಾಯಕರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ
6.	ಶ್ರೀ ಎನ್. ಪೋಬಲೆನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ-ವಿಭಾಗ, ಸಂಡೂರು
7.	ಶ್ರೀಮತಿ ಫರೀದಾಬೇಗಂ, ಉಪ ನೋಂದಣಿಧಿಕಾರಿಗಳು, ಸಂಡೂರು
8.	ಶ್ರೀ ಜಾನ್‌ಸುಂದ್ರ ಪಟೇಲ್, ಸಹಾಯಕ ಅಭಿಯಂತರರು, ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ಬಳ್ಳಾರಿ.
9.	ಶ್ರೀ ಕೆ.ಬಿ. ರವಿ, ಸಹಾಯಕ ಅಭಿಯಂತರರು, ಕರ್ನಾಟಕ ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಸಂಡೂರು.
10	ಶ್ರೀ ಕೃಷ್ಣ ಕುಮಾರ್, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ, ಬಳ್ಳಾರಿ
11	ಶ್ರೀ ಕೆ.ಬಿ.ಸುರೇಶ್ ಪ್ರಥಮ ದರ್ಜೆ ಸಹಾಯಕರು, ಸಹಾಯಕ ಆಯುಕ್ತರ ಕಛೇರಿ, ಬಳ್ಳಾರಿ

ಸಭೆಯ ನಡವಳಿಗಳು

ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಹಾಗೂ ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸಿದರು.

ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ-ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸುಲ್ತಾನಪುರ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಗ್ರಾಮದ ಸ್ಥಳಾಂತರದ ಬಗ್ಗೆ ಈಗಾಗಲೇ ದಿನಾಂಕ: 02-11-2021 ರಂದು ಸುಲ್ತಾನಪುರ ಗ್ರಾಮ ಸ್ಥಳಾಂತರಿಸುವ ಕುರಿತು ಸಾರ್ವಜನಿಕ ವಿಚಾರಣೆ ಸಭೆಯನ್ನು ಗ್ರಾಮದಲ್ಲಿ ನಡೆಸಲಾಯಿತು. ಸದರಿ ಸಭೆಯ ನಡವಳಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು. ಮತ್ತು ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 16-12-2021 ರಂದು ವಿವಿಧ ಉದ್ದಿಮೆಗಳ ಮುಖ್ಯಸ್ಥರ ಜೊತೆ

ಸಹಾಯಕ ಆಯುಕ್ತರ ಕಛೇರಿಯಲ್ಲಿಯು ಸಹ ಸಭೆ ನಡೆಸಲಾಯಿತು. ಸದರಿ ಸಭೆಯ ನಡವಳಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು ಈ ಕೆಳಕಂಡ ನಿರ್ದೇಶನಗಳನ್ನು ನೀಡಿರುತ್ತಾರೆ.

- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತೋರಣಗಲ್ಲು ಇವರು ಸುಲ್ತಾನಪುರ ಗ್ರಾಮದಲ್ಲಿರುವ ಮನೆ ಮತ್ತು ಖಾಸಗಿ ನಿವೇಶನಗಳ ಪಟ್ಟಿಯನ್ನು ಸಿದ್ದಪಡಿಸಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ರವರಿಗೆ 7 ದಿನಗಳಲ್ಲಿ ಸಲ್ಲಿಸುವುದು. ತದನಂತರ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಬಳ್ಳಾರಿ ರವರು ಸಿದ್ದಪಡಿಸಿದ ಮನೆ ಮತ್ತು ಖಾಸಗಿ ನಿವೇಶನಗಳ ಪಟ್ಟಿಯನ್ನು ಮೌಲ್ಯ ಮಾಪನ ಮಾಡಿ 20 ದಿನಗಳಲ್ಲಿ ಸಹಾಯಕ ಆಯುಕ್ತರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

- ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಳ್ಳಾರಿ ರವರಿಗೆ ಸುಲ್ತಾನಪುರ ಗ್ರಾಮದ ಸರ್ವೆ ನಂಬರ್ ಗಳಲ್ಲಿರುವ ತೋಟಗಾರಿಕೆ ಬೆಳೆಗಳ ಮೌಲ್ಯ ಮಾಪನವನ್ನು ಮಾಡಿ 20 ದಿನಗಳಲ್ಲಿ ಸಹಾಯಕ ಆಯುಕ್ತರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

- ತಹಶೀಲ್ದಾರರು ಸಂಡೂರು ರವರಿಗೆ ಸುಲ್ತಾನಪುರ ಗ್ರಾಮದ ಸರ್ವೆ ನಂಬರ್ ಗಳಲ್ಲಿರುವ ಕೃಷಿ ಜಮೀನುಗಳ ಮಾಹಿತಿಯನ್ನು ಸಿದ್ದಪಡಿಸಿ 10 ದಿನಗಳಲ್ಲಿ ಉಪ ನೊಂದಾಣಿಧಿಕಾರಿಗಳು, ಸಂಡೂರು ರವರಿಗೆ ಸಲ್ಲಿಸಲು ತಿಳಿಸಲಾಗಿದೆ. ತದನಂತರ ಉಪನೋಂದಾಣಿಧಿಕಾರಿಗಳು, ಸಂಡೂರು ರವರು ಕೃಷಿ ಜಮೀನುಗಳ ಮೌಲ್ಯಮಾಪನ ಮಾಡಿ 20 ದಿನಗಳಲ್ಲಿ ಸಹಾಯಕ ಆಯುಕ್ತರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

- ಸುಲ್ತಾನಪುರ ಗ್ರಾಮದ ಸುತ್ತಮುತ್ತಲಿನ ಉದ್ದಿಮೆಯವರು ಸುಲ್ತಾನಪುರ ಗ್ರಾಮವನ್ನು ಸ್ಥಳಾಂತರಿಸಲು ಸೂಕ್ತವಾದ ಮೂಲಭೂತ ಸೌಕರ್ಯನ್ನೊಳಗೊಂಡ ಗೃಹ ನಿರ್ಮಾಣ/ಬಡಾವಣೆಯನ್ನು ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ಕೊನೆಯಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಯವರು ಮಾಹಿತಿಗಳನ್ನು ನಿಗಧಿಪಡಿಸಿದ ಸಮಯದಲ್ಲಿ ನೀಡುವಂತೆ ಆದೇಶಿಸಿದರು.

ಶ್ರೀ ಪವನ ಕುಮಾರ ಮಾಲಾಪಾಟಿ, ಭಾ.ಆ.ಸೇ.
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ,
ಬಳ್ಳಾರಿ

ಅನುಬಂಧ-೭

AAQM Results Sultanpura Village, Sandur Tq Bellary District 2017-2021

S.No	Location	Date	PM_{10} Standard 100 µg/m³	$PM_{2.5}$ Standard 60 ug/m3	Remarks
1	Top of the Honnursab House Sultanpura village,Sandur Taluk, Ballari District	13 01 2022	48		
2	Top of the Honnursab House, Sultanpura village,Sandur Taluk, Ballari District	13 12 2021	64		
3	Top of the Honnursab House Sultanpura village,Sandur Taluk Ballari District	08 11 2021	53		
4	Top of the Honnursab House, Sultanpura village,Sandur Taluk, Ballari District	13 09 2021	75		
5	Top of the Honnursab House, Sultanpura village,Sandur Taluk, Ballari District	05.08.2021	118	--	PM_{10} Not Conforming
6	Top of the Honnursab House, Sultanpura village,Sandur Taluk, Ballari District	16.07.2021	83	--	
7	Near Mr Jambayya House, Sultanpura Village, Sandur Taluk, Ballari District	04 11 2020 (Mob Van)	143	53	PM_{10} Not Conforming
8	Top of Jambayya House, Sultanpura Village, Sandur Taluk, Ballari District	25.03.2019	194	--	PM_{10} Not Conforming
9	Near Mr.Jambayya House, Sultanpura Village, Sandur Taluk, Ballari District	07.03.2019 (Mob Van)	149	37	PM_{10} Not Conforming
10	Near Mr.Jambayya House, Sultanpura Village, Sandur Taluk, Ballari District	05.02.2019 (Mob Van)	235	67	PM_{10} & $PM_{2.5}$ Not Conforming
11	Top of Jambayya House, Sultanpura Village, Sandur Taluk, Ballari District	25 01.2019	68	--	
12	Near Mr.Jambayya House, Sultanpura Village, Sandur Taluk, Ballari District	25.10.2018 (Mob Van)	255	47	PM_{10} Not Conforming
13	Top of Jambayya House, Sultanpura Village, Sandur Taluk, Ballari District	24.09.2018	84	13	
14	Top of Jambayya House, Sultanpura Village, Sandur Taluk, Ballari District	30 7 2018	68	19	
15	Top of Jambayya House, Sultanpura Village, Sandur Taluk, Ballari District	06.7.2018	109	23	PM_{10} Not Conforming
16	Top of Jambayya House, Sultanpura Village, Sandur Taluk, Ballari District	25.5.2018	61	40	
17	Top of Jambayya House, Sultanpura Village, Sandur Taluk, Ballari District	04.5.2018	55	29	
18	Top of Jambayya House, Sultanpura Village, Sandur Taluk, Ballari District	26 4.2018	78	18	
19	Top of Jambayya House, Sultanpura Village, Sandur Taluk, Ballari District	15 02.2018	70	32	
20	Top of Jambayya House, Sultanpura Village, Sandur Taluk, Ballari District	08 12 2017	705	38	PM_{10} Not Conforming
21	Top of Jambayya House, Sultanpura Village, Sandur Taluk, Ballari District	08 11 2017	108	41	PM_{10} Not Conforming
22	Top of Jambayya House, Sultanpura Village, Sandur Taluk, Ballari District	23 10 2017	71	32	
23	Top of Jambayya House, Sultanpura Village, Sandur Taluk, Ballari District	09 10 2017	134	36	PM_{10} Not Conforming
24	Top of Jambayya House, Sultanpura Village, Sandur Taluk, Ballari District	23 09.2017	18	11	
25	Top of Thippeswamy House Sultanpura Village Sandur Taluk Ballari District	20 09 2017	11	17 5	

26	Top of Jambayya House Sultanpura Village, Sandur Taluk, Ballari District	11 09 2017	82	34.1	
27	Top of the Honnursab House, Sultanpura village,Sandur Taluk, Ballari District	08 08.2017	46	--	
28	Top of the Honnursab House Sultanpura village,Sandur Taluk Ballari District	07 07 2017	57	30	
29	Top of the Honnursab House Sultanpura village,Sandur Taluk Ballari District	06 05 2017	59		
30	Top of the Honnursab House Sultanpura village,Sandur Taluk, Ballari District	07 04 2017	52	--	

ಅನುಬಂಧ-3

ಸುಲ್ತಾನಪುರ ಗ್ರಾಮ ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಗ್ರಾಮದ ಸ್ಥಳಾಂತರ ಮಾಡುವ ಕುರಿತು ಸಾರ್ವಜನಿಕ ವಿಚಾರಣೆಯನ್ನು ದಿನಾಂಕ:02-11-2021 ರಂದು ಬೆಳಗ್ಗೆ 11.00 ಗಂಟೆಗೆ ನಡೆಸಿದ್ದು ಸದರಿ ಸಭೆಯ ನಡಾವಳಿಗಳು:-

ಸುಲ್ತಾನಪುರ ಗ್ರಾಮ ಸ್ಥಳಾಂತರದ ಕುರಿತಾದ ಸಾರ್ವಜನಿಕ ವಿಚಾರಣೆ ಸಭೆಯ ಸ್ಥಳ	ಸರ್ಕಾರಿ ಪ್ರಾಥಮಿಕ ಶಾಲೆ, ಸುಲ್ತಾನಪುರ ಗ್ರಾಮ ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ

1.	ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ
2	ಶ್ರೀಮತಿ ರಶ್ಮಿ ಹೆಚ್.ಜೆ. ಕೆ.ಆ.ಸೇ. ತಹಶೀಲ್ದಾರ್ ಸಂಡೂರು
3.	ಶ್ರೀ ಉಮಾಶಂಕರ್. ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ.
ಹಾಜರಿದ್ದ ಇತರ ಅಧಿಕಾರಿಗಳ ವಿವರ	
1	ಶ್ರೀ ಕೆ.ಮಂಜುನಾಥ, ಪ್ರಭಾರ ಕಂದಾಯ ನಿರೀಕ್ಷಕರು, ಸುಲ್ತಾನಪುರ ಗ್ರಾಮ
2	ಶ್ರೀ ಹನುಮಂತಪ್ಪ, ಪಂಚಾಯತ ಅಭಿವೃದ್ಧಿ ಅಧಿಕಾರಿ
3	ಶ್ರೀ ಹನುಮಪ್ಪ ನಾಯಕ್, ತೋಟಗಾರಿಕೆ ಇಲಾಖೆ, (ಜಿ.ಪಂ) ಸಂಡೂರು
4	ಶ್ರೀಮತಿ ಚೈತ್ರ ಎನ್ ಕೆ, ಕೈಗಾರಿಕಾ ವಿಸ್ತರಣಾಧಿಕಾರಿಗಳು, ಸಂಡೂರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬಳ್ಳಾರಿ
5	ಶ್ರೀ ಪೇಮಮೂರ್ತಿ ಕೆ, ಸಿ.ಡಿ.ಪಿ.ಒ. ಸಂಡೂರು
6	ಡಾ ಹೆಚ್. ರಂಗಪ್ಪ ಪಶುಪಾಲನಾ ಇಲಾಖೆ
7	ಶ್ರೀ ಸಿ.ವಿ. ಮಂಜುನಾಥ ರೆಡ್ಡಿ , ಕೃಷಿ ಇಲಾಖೆ
8	ಶ್ರೀ ಎಂ ರವಿದಾಸ್ ಕಾರ್ಮಿಕ ನಿರೀಕ್ಷಕರು,
9	ಶ್ರೀ ಐ.ಆರ್ ಅಕ್ಕಿ, ಬಿ.ಇ.ಒ.
10	ಡಾ ಕುಶಾಲ್ ರಾಜ್ ತಾಲೂಕು ಆರೋಗ್ಯಾಧಿಕಾರಿಗಳು, ಸಂಡೂರು
ಹಾಜರಿದ್ದ ಜನಪ್ರತಿನಿಧಿಗಳ ವಿವರ	
1.	ಶ್ರೀಮತಿ ಸಿ. ಮಹೇಶ್ವರಿ ಕೆಪ್ಪಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷರು
2.	ಶ್ರೀ ಆರ್ ಗೋವಿಂದ ರೆಡ್ಡಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು
3.	ಶ್ರೀ ಮೌನೇಶ, ಗ್ರಾಮ ಪಂಚಾಯಿತಿ ಸದಸ್ಯರು
4.	ಶ್ರೀಮತಿ ಕೆ.ದೇವಿ, ಗ್ರಾಮ ಪಂಚಾಯಿತಿ ಸದಸ್ಯರು

1. ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ಪಟ್ಟಿಯ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
2. ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಭಾಗವಹಿಸಿದ ಸಾರ್ವಜನಿಕರ ಹೆಸರು ಮತ್ತು ಸಹಿ ಇರುವ ಹಾಜರಾತಿ ಪಟ್ಟಿಯ ಪ್ರತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ.

<u>ಸಭೆಯ ನಡವಳಿಗಳು</u>

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾ ಶ್ರೀ ಉಮಾಶಂಕರ್ ಪಿ.ಕೆ. ಅವರು ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾ ದಂಡಾಧಿಕಾರಿಗಳು, ಬಳ್ಳಾರಿ ಮತ್ತು ಶ್ರೀಮತಿ ರಶ್ಮಿ ಹೆಚ್.ಜಿ. ಕೆ.ಆ.ಸೇ. ತಹಶೀಲ್ದಾರ್ ಸಂಡೂರು ಅವರಿಗೆ ಸ್ವಾ ಕೋರಿದರು. ಹಾಗೂ ಸಭೆಯಲ್ಲಿದ್ದ ಇತರ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ, ಜನ ಪ್ರತಿನಿಧಿಗಳಿಗೆ, ಎ ಸಾರ್ವಜನಿಕರಿಗೆ, ಮತ್ತು ಪತ್ರಿಕಾ ಮಾಧ್ಯಮದವರಿಗೆ ಸ್ವಾಗತ ಕೋರಿದರು ಹಾಗೂ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಹಾಯಕ ಆಯುಕ್ತರು ಮತ್ತು ಉ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ರವರನ್ನು ಕೋರಿದರು.

ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಯಕ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ ರವರು ಸಭೆಯನ್ನು ಉದ್ದೇಶಿಸಿ ಸುಲ್ತಾನಪುರ ಗ್ರಾಮ ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಗ್ರಾಮದ ಸ್ಥಳಾಂತರದ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಸಾರ್ವಜನಿಕ ವಿಚಾರಣೆ ಅಗತ್ಯತೆಯನ್ನು ಸಭೆಗೆ ವಿವರಿಸಿದರು.

ಸಭೆಯ ಅಧ್ಯಕ್ಷರು ಸುಲ್ತಾನಪುರ ಗ್ರಾಮ ಸ್ಥಳಾಂತರದ ಬಗ್ಗೆ ಕುರಿತಾಗಿ ಯಾವುದ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿ ಸಾರ್ವಜನಿಕರನ್ನು ಕೋರಿದರು.

ಆ ಮೇರೆಗೆ ಸಾರ್ವಜನಿಕರು ಸುಲ್ತಾನಪುರ ಗ್ರಾಮ ಸ್ಥಳಾಂತರದ ಕುರಿತಾದ ತಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. ಶ್ರೀ ಆರ್ ಗೋವಿಂದ ರೆಡ್ಡಿ ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ, ಸಾರ್ವಜನಿಕರು ಗ್ರಾಮದ ಸ್ಥಳಾಂತರದ ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಾಗೂ ಸಲಹೆಗಳನ್ನು ನೀಡುವಂತೆ ತಿಳಿಸಿದರು ಸಾರ್ವಜನಿಕರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಕೋರಿದರು. ಗ್ರಾಮಸ್ಥರು ಕುರ್ಚಿ ಬಿದ್ದು ನಿರ್ಧಾರ ತೆಗೆದುಕೊಳ್ಳಬಾರದೆಂದು ಹೇಳಿದರು. ತಾವು ಪುರಾತನ ಕಾಲದಿಂದ ಇಲ್ಲಿ ವಾಸಿಸುತ್ತಿದ್ದು, ಸ್ಥಳಾಂತರದಿಂದ ಆಗುವ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಯೋಚಿಸಬೇಕೆಂದು ಹೇಳಿದರು.

2. ಶ್ರೀ ಬಂಡಯ್ಯ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ತಾವು ಗ್ರಾಮವನ್ನು ಸುಮ್ಮನೆ ಸ್ಥಳಾಂತ ಮಾಡುವಂತೆ ಕೇಳುತ್ತಿಲ್ಲವೆಂದು ತಿಳಿಸಿದರು. ಗ್ರಾಮವನ್ನು ಸ್ಥಳಾಂತರಿಸುವುದರ ಜೊತೆಗೆ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಹಾಗೂ ಸ್ಥಳಾಂತರಿಸಿದ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತ ಆಗ್ರಹಿಸಿದರು. ತಾವು ಸಹ ಸುಲ್ತಾನಪುರ ಗ್ರಾಮದ ಜೊತೆ ಭಾವನಾತ್ಮಕ ಸಂಬಂಧವನ್ನು ಹೊಂದಿರುವುದಾಗಿ ಆದರು ಸಹ ಗ್ರಾಮದಲ್ಲಿ ವಾಯು ಮಾಲಿನ್ಯ ಹೆಚ್ಚಾಗಿರುವುದರಿಂದ ಹಾಗೂ ಸದರಿ ಗ್ರಾಮವು ವಾಸ ಮಾಡಲು ಯೋಗ್ಯ ಸ್ಥಳವಾಗಿಯುವುದಿಲ್ಲದಿಯುವುದರಿಂದ ಸ್ಥಳಾಂತರಿಸುವಂತೆ ತಿಳಿಸಿದರು. ವೈಜ್ಞಾನಿಕ ಕಾರಣಗಳಿಂದ ಗ್ರಾಮ ಸ್ಥಳಾಂತರಿಸಬೇಕೆಂದರು. ಗ್ರಾಮದ ರೈತರ ಸುಮಾರು 100 ಎಕರೆ ಭೂಮಿ ಗ್ರಾಮದ ಸುತ್ತಮುತ್ತ ಇರುವುದಾಗಿ ತಿಳಿಸಿದರು. ರೈತರಿಗೆ ಸರಿಯಾದ ಇಳುವರಿ ಬರುತ್ತಿಲ್ಲವೆಂದು ಹಾಗೂ ರೈತರು ನಷ್ಟ ಅನುಭವಿಸುತ್ತಿರುವುದಾಗಿ ತಿಳಿಸಿದರು. ರೈತರ ಜಮೀನುಗಳಿಗೆ ವೈಜ್ಞಾನಿಕ ದರ ನಿಗದಿಪಡಿಸುವಂತೆ

ತಿಳಿಸಿದರು. ಗ್ರಾಮದ ಮನೆಗಳಿಗೂ ವೈಜ್ಞಾನಿಕ ಬೆಲೆ ನಿಗದಿ ಪಡಿಸುವಂತೆ ತಿಳಿಸಿದರು. ಗ್ರಾಮದ ಪ್ರತಿಯೊಂದು ಕುಟುಂಬಕ್ಕೂ ಖಾಯಂ ಉದ್ಯೋಗ ಒದಗಿಸುವಂತೆ ತಿಳಿಸಿದರು. ಗ್ರಾಮದ ಜನರು ಆಯ್ಕೆ ಮಾಡುವ ಸ್ಥಳದಲ್ಲಿ ಮಾದರಿ ಗ್ರಾಮವನ್ನು ನಿರ್ಮಾಣ ಮಾಡಿ ಕೊಡುವಂತೆ ತಿಳಿಸಿದರು. ಗ್ರಾಮದ ಸುಮಾರು 50–60 ಕುಟುಂಬದವರು ಅನಕ್ಷರಸ್ಥರಿದ್ದು ಅವರಿಗೆ ಸೂಕ್ತ ತರಬೇತಿ ನೀಡಿ ಸೂಕ್ತ ಉದ್ಯೋಗ ನೀಡುವಂತೆ ಕೋರಿದರು. ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ತಿಂಗಳ ಸಂಬಳ ಸಹ ಸರಿಯಾಗಿ ಪಾವತಿಸುತ್ತಿಲ್ಲವೆಂದು ತಿಳಿಸಿದರು. ಜನರ ಆದಾಯದ 70% ರಿಂದ 80% ಹಣವು ಆಸ್ಪತ್ರೆಗೆ ಖರ್ಚಾಗುತ್ತಿರುವುದಾಗಿ ತಿಳಿಸಿದರು. ಉದ್ದೇಶಿತ ಗ್ರಾಮದಲ್ಲಿ 10ನೇ ತರಗತಿಯವರೆಗಿನ ಶಾಲೆ ನಿರ್ಮಾಣ ಮಾಡುವಂತೆ ಹಾಗೂ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವಂತೆ ತಿಳಿಸಿದರು. ಗ್ರಾಮದ ಮಹಿಳೆಯರಿಗೆ ಸ್ವಾವಲಂಬನೆಗೆ ಮತ್ತು ಆರ್ಥಿಕ ವೃದ್ಧಿಗೆ ಪೂರಕವಾದ ಕಂಪ್ಯೂಟರ್ ತರಬೇತಿ, ಹೊಲಿಗೆ ಯಂತ್ರ ತರಬೇತಿ ಸೇರಿದಂತೆ ಇನ್ನಿತರ ಅಗತ್ಯ ಕಾರ್ಯಕ್ರಮವನ್ನು ರೂಪಿಸುವಂತೆ ತಿಳಿಸಿದರು. ಸುಲ್ತಾನಪುರ ಗ್ರಾಮಕ್ಕೆ ಹೊಂದಿಕೊಂಡಂತೆ 10 ಬೃಹತ್ ಉದ್ದಿಮೆಗಳಿದ್ದು ಇವುಗಳಲ್ಲಿ 8 ದೊಡ್ಡ ಕೆಂಪು ಉದ್ದಿಮೆಗಳಿದ್ದು 02 ಹಳದಿ ಉದ್ದಿಮೆಗಳಿರುವುದಾಗಿ ತಿಳಿಸಿದರು. ಉದ್ದಿಮೆಗಳಿಂದ ಉಂಟಾಗುತ್ತಿರುವ ಮಾಲಿನ್ಯದಿಂದ ಚಿಕ್ಕ ಮಕ್ಕಳಿಗೆ ಆರೋಗ್ಯದ ಸಮಸ್ಯೆ ಗರ್ಭಿಣಿ ಸ್ತ್ರೀಯರು ಸಹ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದಾಗಿ ತಿಳಿಸಿದರು. ಸುಲ್ತಾನಪುರ ಗ್ರಾಮದ ಸುತ್ತಲಿನ ಜಮೀನಿನಲ್ಲಿ ಬೆಳೆಯುವ ಮೆಣಸಿನಕಾಯಿ ಇಳುವರಿ ಸಹ ಕಡಿಮೆ ಆಗಿರುವುದಾಗಿ ತಿಳಿಸಿದರು. ಈ ಎಲ್ಲಾ ಕಾರಣಗಳಿಂದ ಗ್ರಾಮವನ್ನು ಸ್ಥಳಾಂತರಿಸುವಂತೆ ಕೋರಿದರು. ಗ್ರಾಮದಲ್ಲಿ ವಾಸ ಮಾಡುತ್ತಿರುವ 20–30 ಕುಟುಂಬಗಳಿಗೆ ವಸತಿ ಇರುವುದಿಲ್ಲ. ಇಂತಹ ಕುಟುಂಬಗಳಿಗೆ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಮನೆಗಳನ್ನು ನೀಡಬೇಕೆಂದು ಆಗ್ರಹಿಸಿದರು. ಗ್ರಾಮವನ್ನು ಸ್ಥಳಾಂತರ ಮಾಡುವ ನಿರ್ಧಾರದಿಂದ ಯಾವುದೇ ಕಾರಣಕ್ಕೂ ವಿಳಂಬ ನೀತಿ ಅನುಸರಿಸದೇ ಕೂಡಲೇ ಗ್ರಾಮವನ್ನು ಸ್ಥಳಾಂತರ ಮಾಡಿಕೊಡಬೇಕೆಂದು ಒತ್ತಾಯಿಸಿದರು.

3. ಶ್ರೀ ಮರೆಪ್ಪ ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಪ್ರತಿ ಮನೆಗೆ ರೂ 1.5 ಕೋಟಿ ನೀಡುವಂತೆ ಆಗ್ರಹಿಸಿದರು.

4. ಶ್ರೀ ಕೊಟ್ರಪ್ಪ ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಈ ಮೊದಲು ತಾವು 1 ಎಕರೆ ಜಮೀನಿನಲ್ಲಿ 20 ಕ್ವಿಂಟಾಲ್ ಹತ್ತಿಯನ್ನು ಬೆಳೆಸುತ್ತಿದ್ದು ಪ್ರಸ್ತುತ 1 ಎಕರೆಗೆ 4 ರಿಂದ 5 ಕ್ವಿಂಟಾಲ್ ಇಳುವರಿ ಬರುತ್ತಿರುವುದಾಗಿ ತಿಳಿಸಿದರು. ತಮ್ಮ ಮಗಳು ಸಹ ಸಾವಿಗೀಡಾಗಿರುವುದಾಗಿ ತಿಳಿಸಿ, ತಾವು ಪ್ರಸ್ತುತ ಹೊರಟಾಗಲ್ಲು ಗ್ರಾಮಕ್ಕೆ ಸ್ಥಳಾಂತರಗೊಂಡಿರುವುದಾಗಿ ತಿಳಿಸಿದರು. ಗ್ರಾಮವನ್ನು ಬಿಟ್ಟು ಹೋಗುವುದು ಒಳ್ಳೆಯದೆಂದು ಹಾಗೂ ಸ್ಥಳಾಂತರಗೊಂಡ ಗ್ರಾಮದಲ್ಲಿ ಉಚಿತ ಮನೆ ಮತ್ತು ಸ್ಥಳೀಯರಿಗೆ ಉದ್ಯೋಗ ನೀಡುವಂತೆ ತಿಳಿಸಿದರು.

5. ಶ್ರೀ ಕೆ. ವೃಷಬೇಂದ್ರ ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮವನ್ನು ಸ್ಥಳಾಂತರಿಸುವುದಕ್ಕೆ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು.

6. ಶ್ರೀ ವೆಂಕಟರೆಡ್ಡಿ ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮಸ್ಥರು ತಮ್ಮ ಮುಂದಿನ ಭವಿಷ್ಯದ ಬಗ್ಗೆ ನಿರ್ಧಾರ ಮಾಡುವ ದಿನ ಎಂದು ತಿಳಿಸಿದರು. ಸ್ವಂತ ಗ್ರಾಮವನ್ನು ಬಿಡುವುದು ದುಃಖದ ಸಂಗತಿಯೆಂದು ತಿಳಿಸಿದರು. ತಾವುಗಳು ಸಾಲ ಮಾಡಿ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡಿರುವುದಾಗಿ

ತಿಳಿಸಿದರು. ಗ್ರಾಮದಲ್ಲಿ ತೊಂದರೆ ಇರುವುದರಿಂದ ಸಹ ಕರೆದಿರುವುದಾಗಿ ತಿಳಿಸಿದರು. ಗ್ರಾಮದ ಸಂತೋಷವಾಗಿ ಕಳಿಸಿಕೊಡಬೇಕೆಂದು ಕೋರಿದರು. ತಾವುಗಳು ಗ್ರಾಮವನ್ನು ಬಿಡುವುದಕ್ಕೆ ತಯಾರಿರುವ ಸರ್ಕಾರದ ಮಿತ ಬೆಲೆ ನೀಡಿದರೆ ನಮಗೆ ಅನ್ಯಾಯವಾಗುತ್ತದೆ ಎಂದು ತಿಳಿಸಿದರು.

7. ಶ್ರೀ ಗೋವಿಂದ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮವನ್ನು ಸ್ಥಳಾಂತರಿಸಲು ಒಪ್ಪಿಗೆ ಇರುವುದಾಗಿ ಹಾಗೂ ಒಳ್ಳೆಯ ಬೆಲೆಯನ್ನು ನೀಡುವಂತೆ ಆಗ್ರಹಿಸಿದರು.

8. ಶ್ರೀ ತಿಪ್ಪೇಶ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮಸ್ಥರು ತಮ್ಮ ಭೂಮಿಗಳನ್ನು ಇಟ್ಟು ನಿರ್ಧಾರ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಗ್ರಾಮವನ್ನು ಸ್ಥಳಾಂತರ ಮಾಡಲು ತಮ್ಮ ಒ ಇರುವುದಾಗಿ ತಿಳಿಸಿದರು. ಗ್ರಾಮಸ್ಥರ ಬೇಡಿಕೆಗಳನ್ನು ಈಡೇರಿಸುವಂತೆ ಹಾಗೂ ಖಾಯಂ ಉದ ನೀಡುವಂತೆ ತಿಳಿಸಿದರು. ಆರ್ಥಿಕವಾಗಿ ಜನ ಬೆಳೆಯಬೇಕೆಂದು ಹಾಗೂ ಸರ್ಕಾರ ಭೂಮಿಯ ಬೆಲೆ ಇ ಗಮನದಲ್ಲಿಟ್ಟು ನಿಗದಿ ಮಾಡುವಂತೆ ತಿಳಿಸಿದರು.

9. ಶ್ರೀ ಹನುಮೇಶ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ತಾವು ಗ್ರಾಮವನ್ನು ಸ್ಥಳಾಂತರ ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ನಿರ್ಧರಿಸಿರುವುದಾಗಿ ತಿಳಿಸಿದರು. ಜಿಂದಾಲ್ ಉದ್ದಿಮೆಯವರು ಗ್ರಾಮವನ್ನು ದತ್ತು ತೆಗೆದುಕೊಳ್ಳುವಂತೆ ತಿಳಿಸಿದರು. ಸೂಕ್ತವಾದ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿದರು

10. ಶ್ರೀ ಹುಸೇನ ಪಾಷಾ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮ ಬಿಡುತ್ತೇವೆಂದು ಹೇ ಹಣ ಕೊಡಿ, ಎಂದರೆ ಹೇಗೆ, ಎಂದು ತಿಳಿಸಿದರು. ತಮ್ಮ ನಿವೇಶನ ಪಂಚಾಯಿತಿಗೆ ಸೇರಿರುವುದಿಲ್ಲವೆ ತಿಳಿಸಿದರು.

11. ಶ್ರೀ ಶಿವಕುಮಾರ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಉದ್ದಿಮೆಗಳಿಂದ ತೊಂ ಇರುವುದಾಗಿ ಹಾಗೂ ವಾಯು ಮಾಲಿನ್ಯ ಉಂಟಾಗುತ್ತಿರುವುದಾಗಿ ತಿಳಿಸಿದರು. ಗ್ರಾಮದಲ್ಲಿ ನೀರಿನ ಸಮ ಇರುವುದಾಗಿ ತಿಳಿಸಿದರು. ಶುದ್ಧವಾದ ಗಾಳಿ ದೊರೆಯದಿರುವುದರಿಂದ ಸಮಸ್ಯೆ ಉಂಟಾಗುತ್ತಿರುವುದ ತಿಳಿಸಿದರು. ಮುಂದಿನ ಪೀಳಿಗೆಗಾಗಿ ಸ್ಥಳಾಂತರಿಸಲು ಒಪ್ಪಿಗೆ ಇದೆ ಎಂದು ತಿಳಿಸಿದರು. ಕೆಲಸ ಇ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವಂತೆ ತಿಳಿಸಿದರು. ಗ್ರಾಮದಲ್ಲಿರುವ 50–60 ಕುಟುಂಬಗಳ ಉದ್ಯೋಗ ಇರುವುದಿಲ್ಲವೆಂದು ತಿಳಿಸಿದರು. ಒಂದು ಎಕರೆ ಜಮೀನಿಗೆ 1 ಕೋಟಿ 20 ಲಕ್ಷ ರೂಪಾ ನೀಡುವಂತೆ ತಿಳಿಸಿದರು. ಗ್ರಾಮಸ್ಥರಿಗೆ ಶಾಶ್ವತ ಉದ್ಯೋಗ ನೀಡುವಂತೆ ಆಗ್ರಹಿಸಿದರು. ಭೂಮಿಗೆ ವಾಣಿ ಬೆಲೆ ನೀಡಬೇಕೆಂದು ತಿಳಿಸಿದರು. ಮನೆಗಳಿಗೆ ಎರಡು ಪಟ್ಟು ಬೆಲೆ ನೀಡುವಂತೆ ತಿಳಿಸಿದರು. 10 ತರಗತಿವರೆಗೆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವಂತೆ ತಿಳಿಸಿದರು. ಪ್ರತಿಯೊಬ್ಬರಿಗೂ 40× ಅಳತೆಯಲ್ಲಿ 2 ಬೆಡ್ ರೂಮ್ ಹೊಂದಿದ ಮನೆ ನೀಡುವಂತೆ ತಿಳಿಸಿದರು. ಗ್ರಾಮವನ್ನು ಮಾದ ಗ್ರಾಮವನ್ನಾಗಿ ಮಾಡಿ ಗ್ರಾಮದಲ್ಲಿ ಆಸ್ಪತ್ರೆ, ದೇವಸ್ಥಾನ, ಶಾಲೆ, ಗ್ರಂಥಾಲಯ, ಮಸೀ ನಿರ್ಮಿಸಿಕೊಡಬೇಕೆಂದು ತಿಳಿಸಿದರು. ಅನಕ್ಷರಸ್ಥರಿಗೆ ಉದ್ಯೋಗ, ಮಹಿಳೆಯರಿಗೆ ಕಂಪ್ಯೂಟರ್ ತರಬೇ ಆಟದ ಮೈದಾನ ಮತ್ತು 3 ಎಕರೆ ರುದ್ರಭೂಮಿ ಮಾಡುವಂತೆ ತಿಳಿಸಿದರು. ಶಾಲಾ ಶಿಕ್ಷಕರಿಗೆ, ಅಂಗನವಾ ಕಾರ್ಯಕರ್ತರಿಗೆ ವಸತಿ ವ್ಯವಸ್ಥೆ ಮಾಡುವಂತೆ ಹಾಗೂ ವಸತಿ ಹೀನರಿಗೆ ವಸತಿ ವ್ಯವಸ್ಥೆ ಕಲ್ಪಿಸುವಂ ತಿಳಿಸಿದರು.

12. ಶ್ರೀ ಹನುಮಂತರಾಯ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮ ಸ್ಥಳಾಂತರ ಮಾಡುವಂತೆ 2017 ರಿಂದ ಹೋರಾಟ ಮಾಡುತ್ತಿರುವುದಾಗಿ ತಿಳಿಸಿದರು. ಜನರ ಬೇಡಿಕೆ ಈಡೇರಿದರೆ ತಾವು ಸ್ಥಳಾಂತರಕ್ಕೆ ಸಿದ್ಧರಿರುವುದಾಗಿ ತಿಳಿಸಿದರು. ಸ್ಥಳಾಂತರಿಸಿದ ಗ್ರಾಮಕ್ಕೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ತಿಳಿಸಿದರು.

13. ಶ್ರೀ ಎಸ್ ರಾಘವೇಂದ್ರ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ತಾವು ಅಲೆಮಾರಿ ಸಂಘದ ಪರವಾಗಿ ಮಾತನಾಡುತ್ತಿರುವುದಾಗಿ, ಹಾಗೂ ತಮ್ಮ ಬೇಡಿಕೆಗಳು ಈಡೇರಿದರೆ ಸ್ಥಳಾಂತರಗೊಳ್ಳಲು ಸಿದ್ಧರಿರುವುದಾಗಿ ತಿಳಿಸಿದರು.

14. ಶ್ರೀ ಎಸ್ ಹುಲುಗಪ್ಪ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ತಾವು ಅಲೆಮಾರಿ ಕುಟುಂಬದಿಂದ ಬಂದಿರುವುದಾಗಿ ತಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಹಾಗೂ ಎಲ್ಲರಿಗೂ ಉಪಯೋಗವಾಗುವ ರೀತಿಯಲ್ಲಿ ಅನುಕೂಲ ಮಾಡಿಕೊಡುವಂತೆ ತಿಳಿಸಿದರು.

15. ಶ್ರೀ ಸಿ.ಕೆ ಮಲ್ಲಿಕಾರ್ಜುನ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ತಾವು ಗ್ರಾಮವನ್ನು ಬಿಡುವುದಕ್ಕೆ ತಯಾರಿರುವುದಾಗಿ ಹಾಗೂ ತಮ್ಮ ಬೇಡಿಕೆಗಳನ್ನು ಸರ್ಕಾರ ಒಪ್ಪಬೇಕೆಂದು ತಿಳಿಸಿದರು.

16. ಶ್ರೀಮತಿ ಸಂಧ್ಯಾ ಪಿ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಈಗಿರುವ ಭೂಮಿಯನ್ನು ರೈತರು ಕೊಟ್ಟರೆ ಮುಂದೆ ರೈತರು ಏನು ಕೆಲಸ ಮಾಡಬೇಕೆಂದು ಕೇಳಿದರು. ಸರ್ಕಾರ ಹಣ ನೀಡಿದರೆ ಎಲ್ಲಾ ಹಣವನ್ನು ಕುಡಿದು ಹಾಳು ಮಾಡುತ್ತಾರೆಂದು ತಿಳಿಸಿದರು. ಆದುದರಿಂದ ಭೂಮಿ ಮತ್ತು ಹಣ ಎರಡನ್ನು ನೀಡಬೇಕೆಂದು ತಿಳಿಸಿದರು.

17. ಶ್ರೀ ಕೆ ಹೊನಗೇರಪ್ಪ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಉಚಿತ ಔಷಧಿಗಳನ್ನು ನೀಡುವಂತೆ ಹಾಗೂ ಸಂಜೀವಿನಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಕೊಡಿಸುವಂತೆ ಆಗ್ರಹಿಸಿದರು.

18. ಶ್ರೀ ಕೆ ತಿಮ್ಮಪ್ಪ, ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಉತ್ತಮ ಬೆಲೆ ಸಿಕ್ಕರೆ ಗ್ರಾಮವನ್ನು ಸ್ಥಳಾಂತರಿಸಲು ತಾವು ತಯಾರಿರುವುದಾಗಿ ತಿಳಿಸಿದರು.

19. ಶ್ರೀಮತಿ ಕೆ ದೇವಿ, ಗ್ರಾಮ ಪಂಚಾಯಿತಿ ಸದಸ್ಯರು ಸುಲ್ತಾನಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮವನ್ನು ಸ್ಥಳಾಂತರ ಮಾಡಬೇಕೆಂದು ತಿಳಿಸಿದರು.

20. ಶ್ರೀ ಲಕ್ಷ್ಮಣ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು ಅಂಚಾಪುರ ಗ್ರಾಮ – ರವರು ಮಾತನಾಡುತ್ತಾ ಗ್ರಾಮದ ಜನರಿಗೆ ಆರೋಗ್ಯದ ಸಮಸ್ಯೆ ಕಂಡುಬರುತ್ತಿರುವುದಾಗಿ ತಿಳಿಸಿದರು. ಗ್ರಾಮಸ್ಥರಲ್ಲಿ 90% ಜನರು ಗ್ರಾಮವನ್ನು ಸ್ಥಳಾಂತರಿಸಲು ಸಹಮತ ವ್ಯಕ್ತಪಡಿಸಿದ್ದಾರೆಂದು ತಿಳಿಸಿ, ಗ್ರಾಮಸ್ಥರ ಬೇಡಿಕೆಗಳನ್ನು ಈಡೇರಿಸುವಂತೆ ತಿಳಿಸಿದರು. ಸರ್ಕಾರ ಮತ್ತು ಉದ್ದಿಮೆಯವರು ಒಂದುಗೂಡಿ ಒಳ್ಳೆಯ ಬೆಲೆ ನಿಗದಿಪಡಿಸುವಂತೆ ತಿಳಿಸಿದರು.

21. ಶ್ರೀ ಎಂ. ಸ್ವಾಮಿ, ಹೊರಣಗಲ್ಲು ಗ್ರಾಮ – ರವರು ಮಾತನಾಡುತ್ತಾ ಜನರಿಗೆ ನೀರು ಕೊಟ್ಟಿದ್ದಾರೆ ಆದ ಉದ್ಯೋಗ ನೀಡುತ್ತಿಲ್ಲವೆಂದು ತಿಳಿಸಿದರು. ಸಾರ್ವಜನಿಕರಿಗೆ ಉಚಿತ ಆರೋಗ್ಯ ಸೇವೆ ನೀಡುವ ತಿಳಿಸಿದರು. ಭೂಮಿಯನ್ನು ಎರಡು ಪಟ್ಟು ಬೆಲೆ ನೀಡುವಂತೆ ತಿಳಿಸಿದರು. ಉಳಿಮೆ ಮಾಡುವ ರೈತರ ಎ ಬೇಡಿಕೆಗಳನ್ನು ಈಡೇರಿಸುವಂತೆ ತಿಳಿಸಿದರು. ಹೊರಣಗಲ್ಲು ಗ್ರಾಮಕ್ಕೆ ಡಾಂಬರ ಕಾರ್ಖಾನೆಯಿಂದ ಬ ವಾಸನೆ ಬರುತ್ತಿರುವದಾಗಿ ತಿಳಿಸಿದರು. ಗ್ರಾಮವನ್ನು ಸ್ಥಳಾಂತರಿಸುವುದು ಸರಿಯಾದ ಕ್ರಮವಲ್ಲವೆಂ ತಿಳಿಸಿದರು. ಎಲ್ಲಾ ಜನರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಆಕಾಶ್ ಶಂಕರ್, ಭಾ.ಆ.ಸೇ, ಸಹಾಂ ಆಯುಕ್ತರು ಮತ್ತು ಉಪ ವಿಭಾಗದ ದಂಡಾಧಿಕಾರಿಗಳು, ಬಳ್ಳಾರಿ ಇವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡ ಸದರಿ ಸಭೆಯು ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವ ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯ ನಾವ್ಯಗಳು ಯಾವುದೇ ತೀರ್ಮಾನ ತೆಗೆದುಕೊಳ್ಳುವದಿಲ್ಲ, ಸದರಿ ಸಭೆಯ ನಡವಳಿಗಳನ್ನು ಮಾ ಜಿಲ್ಲಾಧಿಕಾರಿಯವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗುವುದೆಂದು ತಿಳಿಸಿದರು.

ಛಾಯಾಚಿತ್ರಗಳ (ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಯ (ಪ್ರತಿಯ ಅನುಬಂಧ-4 ರಲ್ಲಿ ಲಗತ್ತಿಸಲಾಗಿದೆ) ಸದರಿ ಸಭೆಯಲ್ಲಿ ಒಟ್ಟು 72 ಮನವಿ ಪತ್ರಗಳು ಸಲ್ಲಿಕೆಯಾಗಿದ್ದು (ಪ್ರತಿಯ ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ)

ಶ್ರೀಮತಿ ರಶ್ಮಿ. ಹೆಚ್. ಜೆ. ಕ.ಆ.ಸೇ. ತಹಶೀಲ್ದಾರ್ ಸಂಡೂರು ರವರು ಮಾತನಾಡುತ್ತಾ, ಈ ಸಾರ್ವಜ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸು ಸಭೆಯನ್ನು ಮುಕ್ತಾಯಗೊಳಿಸಿದರು.

ಡಾ.ಆಕಾಶ್ ಶಂಕರ್, ಭಾ.ಆ.ಸೇ
ಸಹಾಯಕ ಆಯುಕ್ತರು ಮತ್ತು
ಉಪ ವಿಭಾಗದ ದಂಡಾಧಿಕಾರಿಗಳು,
ಬಳ್ಳಾರಿ

(13)

<u>ಅನುಬಂಧ</u>

1. ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

2. ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ.

3. ಸಾರ್ವಜನಿಕ ವಿಚಾರಣೆ ಸಭೆಯ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು ಅನುಬಂಧ- ರಲ್ಲಿ ಲಗತ್ತಿಸಲಾಗಿದೆ.

4. ಸಾರ್ವಜನಿಕ ವಿಚಾರಣೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ ಅನುಬಂಧ-4 ರಲ್ಲಿ ಲಗತ್ತಿಸಲಾಗಿದೆ

5. ಸಾರ್ವಜನಿಕರಿಂದ ಸ್ವೀಕೃತಿಯಾದ ಒಟ್ಟು 72 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿರುತ್ತಾ ಅವುಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ

ಡಾ.ಆಕಾಶ್ ಶಂಕರ್, ಭಾ.ಆ.ಸೇ
ಸಹಾಯಕ ಆಯುಕ್ತರು ಮತ್ತು
ಉಪ ವಿಭಾಗದ ದಂಡಾಧಿಕಾರಿಗಳು,
ಬಳ್ಳಾರಿ